"ಮಧುರ ಮಕ್ಕಳೇ- 21 ಜನ್ಮಗಳಿಗಾಗಿ ಪುಣ್ಯದ ಖಾತೆಯನ್ನು ಜಮಾ ಮಾಡಿಕೊಳ್ಳಬೇಕು, ಯೋಗಬಲದಿಂದ ಪಾಪದ ಖಾತೆಯನ್ನು ಭಸ್ಮ ಮಾಡಿಕೊಳ್ಳಬೇಕು ಆದ್ದರಿಂದ ಅಂತರ್ಮುಖಿಗಳಾಗಿ"

ಪ್ರಶ್ನೆ: ಯಾವ ಶ್ರೀಮತದ ಪಾಲನೆ ಮಾಡಿದಾಗ ಶಬ್ಧದಿಂದ ದೂರ ಹೋಗುವ ಪುರುಷಾರ್ಥ ಸಹಜವಾಗಿಬಿಡುವುದು?

ಉತ್ತರ: ಶ್ರೀಮತವು ಹೇಳುತ್ತದೆ- ಮಕ್ಕಳೇ, ಅಂತರ್ಮುಖಿಗಳಾಗಿ. ಹೊರಗಿನಿಂದ ಏನೂ ಮಾತನಾಡಬೇಡಿ. ಈ ಶ್ರೀಮತವನ್ನು ಪಾಲನೆ ಮಾಡಿದಾಗ ಸಹಜವಾಗಿಯೇ ಶಬ್ಧದಿಂದ ದೂರ ಹೋಗಬಲ್ಲಿರಿ. ಎಷ್ಟು ನೆನಪು ಮಾಡುತ್ತೀರಿ, ಸ್ವದರ್ಶನ ಚಕ್ರವನ್ನು ತಿರುಗಿಸುತ್ತೀರಿ ಅಷ್ಟೂ ಸಂಪಾದನೆ ಜಮಾ ಆಗುತ್ತಾ ಹೋಗುವುದು. ನೆನಪಿಗಾಗಿ ಅಮೃತವೇಳೆಯ ಸಮಯವು ಬಹಳ ಚೆನ್ನಾಗಿದೆ. ಈ ಸಮಯದಲ್ಲಿ ಎದ್ದು ಅಂತರ್ಮುಖಿಗಳಾಗಿ ಆತ್ಮಸ್ವರೂಪದಲ್ಲಿ ಸ್ಥಿತರಾಗಿ ಕುಳಿತುಕೊಳ್ಳಿ.

ಗೀತೆ: ರಾತ್ರಿಯನ್ನು ಮಲಗುತ್ತಾ ಕಳೆದೆ, ಹಗಲನ್ನು ತಿನ್ನುತ್ತಾ ಕಳೆದೆ...........

ಓಂ ಶಾಂತಿ. ಅಂತರ್ಮುಖಿಯಾಗಿ, ಹೊರಗೆ ಏನನ್ನೂ ಮಾತನಾಡಬೇಡಿ ಎಂದು ಯಾರು ತಿಳಿಸುತ್ತಾರೆ. ಆತ್ಮಸ್ವರೂಪದಲ್ಲಿ ಸ್ಥಿತರಾಗಿ ಕುಳಿತುಕೊಂಡಿದ್ದೀರಾ? ತಂದೆಯು ಮಕ್ಕಳಿಗೆ ತಿಳಿಸುತ್ತಾರೆ- ಬಾಯಿಂದ ಏನನ್ನೂ ಮಾತನಾಡಬಾರದು. ರಾಮ-ರಾಮ ಎಂದು ಬಹಳ ಹೇಳುತ್ತಾ ಬಂದರು ಆದರೆ ಅದನ್ನು ಹೇಳುವುದರಿಂದಲೂ ಸಹ ಮನುಷ್ಯರು ಪಾವನರಾಗಲು ಸಾಧ್ಯವಿಲ್ಲ. ಯಾವಾಗ ಪತಿತ-ಪಾವನ ತಂದೆಯ ಶ್ರೀಮತದಂತೆ ನಡೆಯುತ್ತಾರೆಯೋ ಆಗಲೇ ಮನುಷ್ಯರು ಪತಿತರಿಂದ ಪಾವನರಾಗಲು ಸಾಧ್ಯ. ಪತಿತ-ಪಾವನ ಎಂದು ಹೇಳಿದಾಗ ತಂದೆಯ ನೆನಪು ಬರುತ್ತದೆ. ತಂದೆಯು ತಿಳಿಸುತ್ತಾರೆ- ನೀವು ಅವಶ್ಯವಾಗಿ ಪತಿತರಾಗಿದ್ದೀರಲ್ಲವೆ. ಈಗ ನೀವು ಪಾವನರಾಗುತ್ತಿದ್ದೀರಿ. ಸತ್ಯಯುಗದಲ್ಲಿ ಯಾರೂ ಪತಿತರಿರುವುದಿಲ್ಲ. 5000 ವರ್ಷಗಳ ಮೊದಲು ಯಾವಾಗ ಭಾರತವು ಪಾವನವಾಗಿತ್ತೋ ಆಗ ಒಂದೇ ಧರ್ಮವಿತ್ತು. ತಂದೆಯಂತೂ ಸುಖದ ಸೃಷ್ಟಿಯನ್ನು ರಚಿಸುತ್ತಾರಲ್ಲವೆ. ಭಾರತವು ಸುಖಧಾಮವಾಗಿತ್ತು. ಲಕ್ಷ್ಮೀ-ನಾರಾಯಣ, ರಾಮ-ಸೀತೆ ಮುಂತಾದವರ ಮಂದಿರಗಳು ಸತ್ಯ-ತ್ರೇತಾಯುಗದ ಚಿಹ್ನೆಗಳಾಗಿವೆ. ಸತ್ಯಯುಗದಲ್ಲಿ ಅವಶ್ಯವಾಗಿ ಲಕ್ಷ್ಮೀ-ನಾರಾಯಣರ ರಾಜಧಾನಿಯಿತ್ತು. ಇದೇ ಭಾರತದಲ್ಲಿ ಸೂರ್ಯವಂಶಿ, ಚಂದ್ರವಂಶಿಯರ ರಾಜ್ಯ ನಡೆಯುತ್ತಿತ್ತು. ಅದು ಈಗ ಪುನಃ ಸ್ಥಾಪನೆಯಾಗುತ್ತಾ ಇದೆ. ಇದಕ್ಕೆ ಪ್ರಪಂಚದ ಇತಿಹಾಸ, ಭೂಗೋಳವೆಂದು ಹೇಳಲಾಗುವುದು. ಇದನ್ನು ಮನುಷ್ಯರೇ ಅರಿತುಕೊಳ್ಳುತ್ತಾರೆ. ಮನುಷ್ಯರೂ ಸಹ ಅರಿತುಕೊಂಡಿಲ್ಲವೆಂದರೆ ಅವರನ್ನು ಪ್ರಾಣಿಗಳಿಗಿಂತಲೂ ಕೀಳೆಂದು ಹೇಳಲಾಗುವುದು. ತಂದೆಯನ್ನು ಅರಿತುಕೊಳ್ಳಲು ಎಷ್ಟೊಂದು ಅಲೆದಾಡುತ್ತಾರೆ ಆದರೆ ಅರಿತುಕೊಳ್ಳುವುದಿಲ್ಲ. ನೀವು ತಂದೆಯ ಮಕ್ಕಳಾಗಿದ್ದೀರಿ ಆದ್ದರಿಂದ ತಂದೆಯು ತನ್ನ ಪರಿಚಯವನ್ನು ಕೊಡುತ್ತಾರೆ. ಮೊದಲು ಪರಿಚಯವಿಲ್ಲ ಅಂದಾಗ ಅದರ ಪರಿಣಾಮವೇನಾಯಿತು? ಅನಾಥರು, ನಾಸ್ತಿಕರು, ನಿರ್ಧನಿಕರಾಗಿಬಿಡುತ್ತಾರೆ. ಈಗ ನೀವು ತಂದೆಯ ಮಕ್ಕಳಾಗಿದ್ದೀರಿ, ಅವರಿಂದ ಆಸ್ತಿಯನ್ನು ಪಡೆಯುತ್ತಿದ್ದೀರಿ. ಇದು ಬಹಳ ದೊಡ್ಡ ಆಸ್ತಿಯಾಗಿದೆ, 21 ಜನ್ಮಗಳ ಸ್ವರ್ಗದ ರಾಜಧಾನಿ ಸಿಗುತ್ತದೆ. ಇದು ಕಡಿಮೆ ಮಾತಾಗಿದೆಯೇ! ಲಕ್ಷ್ಮೀ-ನಾರಾಯಣರು ರಾಜ್ಯ ಮಾಡಿ 5000 ವರ್ಷಗಳಾಯಿತು ಪುನಃ ಇತಿಹಾಸ ಪುನರಾವರ್ತನೆಯಾಗುತ್ತದೆ.

ತಂದೆಯು ತಿಳಿಸುತ್ತಾರೆ- ನನ್ನ ಶ್ರೀಮತದಂತೆ ನಡೆಯಿರಿ, ಅಂತರ್ಮುಖಿಗಳಾಗಿ ಬಾಹರ್ಮುಖಿಯಾಗಬೇಡಿ. ಈಗ ಇದು ಘೋರ ಅಂಧಕಾರದ ಸಮಯವಾಗಿದೆ. ಇದನ್ನು ರಾತ್ರಿಯೆಂದು ಹೇಳಲಾಗುತ್ತದೆ. ಈಗ ಮುಂಜಾನೆಯು ಬರುತ್ತಾ ಇದೆ. ಕಲಿಯುಗದ ಅಂತ್ಯವನ್ನು ಘೋರ ಅಂಧಕಾರ, ಸತ್ಯಯುಗದ ಆದಿಯನ್ನು ಘೋರ ಪ್ರಕಾಶವೆಂದು ಹೇಳಲಾಗುತ್ತದೆ. ತಂದೆಯು ತಿಳಿಸುತ್ತಾರೆ- ನಾನು ಯಾವಾಗ ಎಲ್ಲಾ ಮನುಷ್ಯರು ಪತಿತರಾಗುತ್ತಾರೆಯೋ ಆಗ ಸಂಗಮಯುಗದಲ್ಲಿಯೇ ಬರುತ್ತೇನೆ. ಈಗ ನೀವು ಮಕ್ಕಳಿಗೆ ಸದಾ ಸುಖದ ಆಸ್ತಿಯನ್ನು ಕೊಡಲು ಬಂದಿದ್ದೇನೆ. ವಿನಾಶವು ಸಮ್ಮುಖದಲ್ಲಿ ನಿಂತಿದೆ. ಬಹಳ ಕಳೆದುಹೋಯಿತು, ಸ್ವಲ್ಪವೇ ಉಳಿದಿದೆ..... ಆದ್ದರಿಂದ ಈಗ ಬೇಗ-ಬೇಗ ಪುರುಷಾರ್ಥ ಮಾಡಿ. ಹೇಗೆ ಎಲ್ಲರೂ ಆಸ್ತಿಯನ್ನು ಪಡೆಯುತ್ತಾರೆಯೋ ಹಾಗೆಯೇ ಬೇಹದ್ದಿನ ತಂದೆಯಿಂದ ಆಸ್ತಿಯನ್ನು ಪಡೆಯಿರಿ. ಎಲ್ಲರೂ ಪುರುಷಾರ್ಥಿಗಳಾಗಿದ್ದಾರೆ. ಈಗ ಎಲ್ಲರೂ ಮಧುರಮನೆ, ಶಬ್ಧದಿಂದ ದೂರ ಹೋಗಬೇಕಾಗಿದೆ. ಅದು ನಾವಾತ್ಮಗಳ ಮನೆ ನಿರ್ವಾಣಧಾಮವಾಗಿದೆ. ಧಾಮವೆಂದರೆ ಅಲ್ಲಿ ಕೇವಲ ಒಬ್ಬರೇ ಇರುವುದಿಲ್ಲ. ಈಗ ಎಷ್ಟು ಜೀವಾತ್ಮರಿದ್ದಾರೆಯೋ ಅವರೆಲ್ಲರೂ ಶರೀರವನ್ನು ಬಿಟ್ಟು ತಮ್ಮ ಮನೆಗೆ ತಂದೆಯ ಬಳಿ ಹೋಗುತ್ತಾರೆ. ಅದು ನಿರಾಕಾರಿ ವೃಕ್ಷವಾಗಿದೆ. ಹೇಗೆ ಚಿತ್ರದಲ್ಲಿಯೂ ವೃಕ್ಷವನ್ನು ತೋರಿಸಲಾಗುತ್ತದೆ ಅದು ನಾವಾತ್ಮಗಳ ಮನೆ ಶಾಂತಿಧಾಮವಾಗಿದೆ. ನಂತರ ನಾವು ಸುಖಧಾಮದಲ್ಲಿ ಬರುತ್ತೇವೆ. ಈಗ 84 ಜನ್ಮಗಳ ಚಕ್ರವು ಮುಕ್ತಾಯವಾಗುತ್ತದೆ. ಕಲಿಯುಗದ ನಂತರ ಸತ್ಯಯುಗವು ಅವಶ್ಯವಾಗಿ ಬರುತ್ತದೆಯಲ್ಲವೆ. ದ್ವಾಪರದ ನಂತರ ಕಲಿಯುಗವು ಅವಶ್ಯವಾಗಿ ಬರುವುದು. ತಂದೆಯು ತಿಳಿಸುತ್ತಾರೆ- ನಾನು ಕಲ್ಪ-ಕಲ್ಪವೂ ಕಲ್ಪದ ಸಂಗಮದಲ್ಲಿ ಬರುತ್ತೇನೆ, ಹಳೆಯ ಪ್ರಪಂಚದ ವಿನಾಶ ಮಾಡಿಸುತ್ತೇನೆ.

ಎಲ್ಲಿಯವರೆಗೆ ಹೊಸಪ್ರಪಂಚ ಸ್ಥಾಪನೆಯಾಗುವುದಿಲ್ಲವೋ ಅಲ್ಲಿಯತನಕ ಈ ಹಳೆಯ ಪ್ರಪಂಚದಲ್ಲಿಯೇ ಇರಬೇಕಾಗುತ್ತದೆ. ಹೇಗೆ ಹೊಸಮನೆಯು ತಯಾರಾಗುವವರೆಗೆ ಹಳೆಯ ಮನೆಯಲ್ಲಿಯೇ ಕುಳಿತಿರುತ್ತಾರಲ್ಲವೆ ನಂತರ ಯಾವಾಗ ಮನೆಯು ತಯಾರಾಗುತ್ತದೆಯೋ ಆಗ ಹಳೆಯದನ್ನು ಬಿಡಲಾಗುತ್ತದೆ ಹಾಗೆಯೇ ಇದೂ ಸಹ ಹಳೆಯ ವಸ್ತುವಾಗಿದೆಯಲ್ಲವೆ. ಇದರ ವಿನಾಶಕ್ಕಾಗಿ ಈ ಮಹಾಭಾರತ ಯುದ್ಧವಿದೆ. ತಂದೆಯು ಕುಳಿತು ಮಕ್ಕಳಿಗೆ ತಿಳಿಸುತ್ತಾರೆ- ಆತ್ಮವೇ ತಿಳಿದುಕೊಳ್ಳುತ್ತದೆ, ಶಾರೀರಿಕ ಜ್ಞಾನವನ್ನೂ ಸಹ ಆತ್ಮವೇ ಕಲಿಯುತ್ತದೆಯಲ್ಲವೆ. ನಾನು ಪ್ರಾಂಶುಪಾಲನಾಗಿದ್ದೇನೆ, ಸರ್ಜನ್ ಆಗಿದ್ದೇನೆಂದು ಆತ್ಮವೇ ಹೇಳುತ್ತದೆ. ಆತ್ಮದ ಜ್ಞಾನವಿಲ್ಲದಿರುವ ಕಾರಣ ದೇಹಾಭಿಮಾನಿ ಆಗಿಬಿಡುತ್ತಾರೆ. ಆತ್ಮವೇ ಸಂಸ್ಕಾರವನ್ನು ತೆಗೆದುಕೊಂಡು ಹೋಗುತ್ತದೆ. ನೀವು ಮಕ್ಕಳು ತಿಳಿದುಕೊಂಡಿದ್ದೀರಿ- ಶಿವತಂದೆಯು ನಾವಾತ್ಮಗಳಿಗೆ ತಿಳಿಸುತ್ತಿದ್ದಾರೆ. ಆತ್ಮವು ಈ ಹಳೆಯ ಶರೀರವನ್ನು ಬಿಟ್ಟುಹೋಗಿ ಹೊಸದನ್ನು ತೆಗೆದುಕೊಳ್ಳುತ್ತದೆ. ನಾವೀಗ ಶ್ಯಾಮರಾಗಿದ್ದೇವೆ ಮತ್ತೆ ಸುಂದರರಾಗುತ್ತೇವೆ. ಸುಂದರರಿಂದ ಶ್ಯಾಮರಾಗುತ್ತೇವೆ. 84 ಜನ್ಮಗಳನ್ನು ಪಡೆಯುತ್ತೇವೆ ನಂತರ ತಂದೆಯು ಕಾಮಚಿತೆಯಿಂದ ಇಳಿಸಿ ಜ್ಞಾನಚಿತೆಯ ಮೇಲೆ ಕೂರಿಸಿ ಸ್ವರ್ಗದ ಮಾಲೀಕರನ್ನಾಗಿ ಮಾಡುತ್ತಾರೆ. ಬೇಹದ್ದಿನ ತಂದೆಯು ಅವಶ್ಯವಾಗಿ ಬೇಹದ್ದಿನ ಆಸ್ತಿಯನ್ನೇ ಕೊಡುವರಲ್ಲವೆ. ತಂದೆಯಂತೂ ಶ್ರೇಷ್ಠರಾಗಿದ್ದಾರೆ ಹಾಗೂ ತಿಳಿಸುತ್ತಾರೆ- ಮಕ್ಕಳಿಗಾಗಿ ವೈಕುಂಠದ ಉಡುಗೊರೆಯನ್ನು ತಂದಿದ್ದೇನೆ, ಅಂಗೈಯಲ್ಲಿ ಸ್ವರ್ಗವನ್ನು ತಂದಿದ್ದೇನೆ. ಸೆಕೆಂಡಿನಲ್ಲಿ ನೀವು ಸಾಕ್ಷಾತ್ಕಾರವನ್ನು ನೋಡುತ್ತೀರಿ. ಇಷ್ಟೊಂದು ಬ್ರಹ್ಮಾಕುಮಾರ-ಕುಮಾರಿಯರಿದ್ದೀರಿ. ಇವರು ಅವಶ್ಯವಾಗಿ ಬ್ರಹ್ಮನ ಮಕ್ಕಳು ಮತ್ತು ಶಿವತಂದೆಯ ಮೊಮ್ಮಕ್ಕಳಾಗಿದ್ದೀರಿ. ನಾವು ಶಿವತಂದೆಯಿಂದ ಆಸ್ತಿಯನ್ನು ಪಡೆಯುತ್ತೇವೆ ಎಂದು ಹೇಳುತ್ತೀರಿ. ಅವರೇ ಸರ್ವರ ಸದ್ಗತಿದಾತನಾಗಿದ್ದಾರೆ, ರಾಜಯೋಗವನ್ನು ಕಲಿಸುತ್ತಾರೆ. ನಿರಾಕಾರ ತಂದೆಯು ಹೇಗೆ ಕಲಿಸುವುದು ಆದ್ದರಿಂದ ಇವರ ಕರ್ಮೇಂದ್ರಿಯಗಳ ಮೂಲಕ ಓದಿಸುತ್ತಾರೆ, ಸೃಷ್ಟಿಚಕ್ರದ ಜ್ಞಾನವನ್ನು ಕೊಡುತ್ತಾರೆ. ಅವರನ್ನೇ ಪರಮಾತ್ಮ, ಸುಪ್ರೀಂ ಸೋಲ್ ಎಂದು ಹೇಳುತ್ತಾರೆ. ಅವರದೇ ಎಲ್ಲಾ ಮಹಿಮೆಯೂ ಆಗಿದೆ. ಜ್ಞಾನಸಾಗರ, ಪತಿತ-ಪಾವನ ಅವರಾಗಿದ್ದಾರೆ ಅಂದಮೇಲೆ ಅವಶ್ಯವಾಗಿ ಬರಬೇಕಾಗುತ್ತದೆ. ನಿಮ್ಮನ್ನೂ ಸಹ ಮಾ॥ ಸುಪ್ರೀಂ ಅಥವಾ ಪಾವನರನ್ನಾಗಿ ಮಾಡುತ್ತಾರೆ. ಅವರೇ ಬೇಹದ್ದಿನ ತಂದೆಯಾಗಿದ್ದಾರೆ. ಅವರನ್ನೇ ಸರ್ವವ್ಯಾಪಿ ಎಂದು ಹೇಳಿಬಿಟ್ಟರೆ ಆಸ್ತಿಯು ಹೇಗೆ ಸಿಗುವುದು? ಮನುಷ್ಯರನ್ನು ಭಗವಂತನೆಂದು ಹೇಳಲು ಸಾಧ್ಯವಿಲ್ಲ. ಕೃಷ್ಣನನ್ನೂ ಸಹ ದೈವೀಗುಣಧಾರಿ ಮನುಷ್ಯನೆಂದು ಕರೆಯಲಾಗುತ್ತದೆ. ಕೃಷ್ಣನು ಮೊದಲ ರಾಜಕುಮಾರನಾಗಿದ್ದನು. ಅವನನ್ನು ಎಲ್ಲರೂ ಉಯ್ಯಾಲೆಯಲ್ಲಿ ತೂಗುತ್ತಾರೆ. ಶಿವತಂದೆಯನ್ನು ಎಂದೂ ತೂಗುವುದಿಲ್ಲ ಏಕೆಂದರೆ ಅವರೆಂದೂ ಮಗುವಾಗುವುದೇ ಇಲ್ಲ. ಇದನ್ನಂತೂ ಸಾಕ್ಷಾತ್ಕಾರ ಮಾಡಿಸುತ್ತಾರೆ, ತಿಳಿಸುವುದಕ್ಕಾಗಿ- ನಾನು ನಿಮ್ಮ ಬಾಲಕನಾಗಿದ್ದೇನೆ, ನೀವು ನನ್ನನ್ನು ತಮ್ಮ ವಾರಸುಧಾರನನ್ನಾಗಿ ಮಾಡಿಕೊಳ್ಳುತ್ತೀರಿ, ಬಲಿಹಾರಿಯಾಗುತ್ತೀರೆಂದರೆ ನಾನೂ ಸಹ ಬಲಿಹಾರಿಯಾಗುತ್ತೇನೆ. ಬಲಿಹಾರಿಯಾಗುತ್ತೀರೆಂದರೆ ಹೇಗೆ ನಾನು ನಿಮ್ಮ ಬಾಲಕನಾದೆನೆಂದು ತಂದೆಯು ತಿಳಿಸುತ್ತಾರೆ.

ಮನುಷ್ಯರಲ್ಲಿ ಎಷ್ಟೊಂದು ಅಂಧಶ್ರದ್ಧೆಯಿದೆ ಅಲ್ಲಿ-ಇಲ್ಲಿ ಹೋಗಿ ತಲೆಬಾಗುತ್ತಾರೆ, ಇದಕ್ಕೆ ಗೊಂಬೆಗಳ ಪೂಜೆಯೆಂದು ಕರೆಯಲಾಗುತ್ತದೆ. ನವರಾತ್ರಿಯಲ್ಲಿ ಬಹಳ ಗೊಂಬೆಗಳನ್ನು ಮಾಡುತ್ತಾರೆ ಆದರೆ ಅವರ ಕರ್ತವ್ಯದ ಬಗ್ಗೆ ಗೊತ್ತಿಲ್ಲ. 4-6 ಭುಜವುಳ್ಳ ದೇವಿಯು ಇರುತ್ತಾರೆಯೇ ಮತ್ತು ಅವರಿಗೆ ಆಯುಧ ಇತ್ಯಾದಿಗಳನ್ನು ಕೊಟ್ಟುಬಿಡುತ್ತಾರೆ ಆದರೆ ದೇವತೆಗಳು ಹಿಂಸಕರಾಗಿರುವುದಿಲ್ಲ. ಶಾಸ್ತ್ರವಾದಿಗಳು ಅವರನ್ನೂ ಸಹ ಹಿಂಸಕರನ್ನಾಗಿ ಮಾಡಿಬಿಟ್ಟಿದ್ದಾರೆ. ನೇಪಾಳದಲ್ಲಿಯೂ ಸಹ ಕಾಳಿಯನ್ನು ಪೂಜಿಸುತ್ತಾರೆ ಆದರೆ ಕಾಳಿಯು ಈ ರೀತಿಯಿದ್ದಾರೆಯೇ? ಮಮ್ಮಾರವರು ಕಾಳಿನಾಲಿಗೆ ಇರುವವರಾಗಿದ್ದಾರೆಯೇ! ಮನುಷ್ಯರಂತೂ ಮನುಷ್ಯರೇ ಆಗಿರುತ್ತಾರೆ. ಬ್ರಹ್ಮಾ-ವಿಷ್ಣು-ಶಂಕರರು ಸೂಕ್ಷ್ಮವತನವಾಸಿಗಳಾಗಿದ್ದಾರೆ. 8-10 ಭುಜಗಳುಳ್ಳ ದೇವತೆಗಳೂ ಯಾರೂ ಇಲ್ಲ. ಇದೆಲ್ಲವೂ ಭಕ್ತಿಮಾರ್ಗದ ಅಲಂಕಾರಗಳಾಗಿವೆ. ಹಣವನ್ನು ಸಂಪಾದಿಸಲು ಏನಾದರೂ ಬೇಕಲ್ಲವೆ. ನಂತರ ಭಿನ್ನ-ಭಿನ್ನ ಚಿತ್ರಗಳನ್ನು ಚಿತ್ರಿಸುತ್ತಾರೆ. ಅಲ್ಲಿಯೇ ನೋಡಿ- ಸುಂದರ ಶ್ರೀಕೃಷ್ಣನ ಮಂದಿರ ಮತ್ತು ಅಲ್ಲಿಯೇ ಕಪ್ಪಾದ ಕೃಷ್ಣನ ಮಂದಿರವೂ ಇರುತ್ತದೆ. ಕಾರಣ ಇರಬೇಕಲ್ಲವೆ. ಎಷ್ಟೊಂದು ಅಂಧಶ್ರದ್ಧೆಯಿದೆ! ಈಗ ಭಕ್ತಿಮಾರ್ಗವು ಸಮಾಪ್ತಿಯಾಗಲಿದೆ. ಜ್ಞಾನಮಾರ್ಗವು ಪ್ರಾರಂಭವಾಗುತ್ತದೆ. ಬಾಕಿ ಸಮಯವಂತೂ ಕಡಿಮೆಯಿದೆ. ಎಲ್ಲರೂ ಅವಶ್ಯವಾಗಿ ಸಾಯಲೇಬೇಕಾಗಿದೆ. ಮಕ್ಕಳು, ಮೊಮ್ಮಕ್ಕಳು ವಾರಸುಧಾರರಾಗುವುದಿಲ್ಲ. ಅಲ್ಲಿ ನಿಮಗೆ ನಾವು ಸಂಗಮದಲ್ಲಿ ರಾಜ್ಯಪದವಿಗಾಗಿ ಈ ಪುರುಷಾರ್ಥವನ್ನು ಮಾಡಿದ್ದೆವು ಎಂಬ ಜ್ಞಾನವೇ ಇರುವುದಿಲ್ಲ. ಅಲ್ಲಂತೂ ಪವಿತ್ರ ಸೃಷ್ಟಿಯು ನಡೆಯುತ್ತದೆ. ಇಲ್ಲಿ ನೀವು ತಿಳಿದುಕೊಂಡಿದ್ದೀರಿ- ಅವಶ್ಯವಾಗಿ ನಾವು ತಂದೆಯ ರಾಜಧಾನಿಗೆ ಹಕ್ಕುದಾರರಾಗಿದ್ದೇವೆ. ಅಲ್ಲಿ ಇದು ಗೊತ್ತಿರುವುದೇ ಇಲ್ಲ- ಯಾವ ಕರ್ಮಗಳನ್ನು ಮಾಡಿದ್ದೆವು, ಹೇಗಾದೆವು, ಇದೆಲ್ಲವೂ ಮರೆತುಹೋಗುತ್ತದೆ. ಅಲ್ಲಿ ಪಾವನರಾಗುವುದಕ್ಕಾಗಿ ಗುರುಗಳನ್ನು ಮಾಡಿಕೊಳ್ಳುವ ಅವಶ್ಯಕತೆಯೇ ಇರುವುದಿಲ್ಲ ಏಕೆಂದರೆ ಅಲ್ಲಿ ಪತಿತರಿರುವುದೇ ಇಲ್ಲ. ತಂದೆಯು ಕಾಲು ತೊಳೆದು ಸಿಂಹಾಸನದಲ್ಲಿ ಕೂರಿಸುತ್ತಾರೆ. ಗುರುಗಳು ಸದ್ಗತಿಗಾಗಿ ಬೇಕು, ಅಲ್ಲಂತೂ ಸದ್ಗತಿ ಇದ್ದೇ ಇರುತ್ತದೆ. ಗುರುಗಳ ಅವಶ್ಯಕತೆಯೇ ಇರುವುದಿಲ್ಲ. ತಂದೆಯು ತಿಳಿಸುತ್ತಾರೆ- ತಮ್ಮನ್ನು ಆತ್ಮನೆಂದು ತಿಳಿಯಿರಿ. ದೇಹಾಭಿಮಾನದಲ್ಲಿ ಇರಬಾರದು. ನಾನಾತ್ಮ ಈಗ ಡಾಕ್ಟರ್‌ನ ರೂಪದಲ್ಲಿದ್ದೇನೆ, ನಾನಾತ್ಮ ಮ್ಯಾಜಿಸ್ಟ್ರೇಟರ್ ಆಗಿದ್ದೇನೆ ನಂತರ ಈ ಶರೀರವನ್ನು ಬಿಟ್ಟನಂತರ ಏನಾಗುತ್ತೇನೆಯೋ ಗೊತ್ತಿಲ್ಲ. ನಾವು ಈ ಶರೀರದ ಮುಖಾಂತರ ಓದುತ್ತೇವೆ. ಆತ್ಮವೇ ಈ ಕರ್ಮೇಂದ್ರಿಯಗಳ ಮುಖಾಂತರ ಓದುತ್ತದೆ, ಆತ್ಮವೇ ಕೇಳುತ್ತದೆ-

ಇವು ತಿಳಿದುಕೊಳ್ಳುವ ಮಾತುಗಳಾಗಿವೆ, ದಂತಕಥೆಗಳಲ್ಲ.

ತಂದೆಯು ತಿಳಿಸುತ್ತಾರೆ- ಇಡೀ ಪ್ರಪಂಚವು ಸ್ಮಶಾನವಾಗಲಿದೆ. ಈಗ ಜಾಗೃತರಾಗಿ, ಇಲ್ಲವೆಂದರೆ ಬಿದುರಿನ ಕಾಡಿಗೆ ಬೆಂಕಿ ಬೀಳುವ ಸಮಯದಲ್ಲಿ ಅಯ್ಯಯ್ಯೋ ಎನ್ನುತ್ತೀರಿ ಆದರೆ ಆಗ ಏನೂ ಮಾಡಲು ಸಾಧ್ಯವಾಗುವುದಿಲ್ಲ, ಮೃತ್ಯುವು ತಿಂದುಬಿಡುವುದು. ತ್ರಾಹಿ, ತ್ರಾಹಿ ಎನ್ನುತ್ತಲೇ ಉಳಿದುಕೊಳ್ಳುತ್ತೀರಿ. ಶಿಕ್ಷೆಗಳನ್ನೂ ಸಹ ಬಹಳ ಅನುಭವಿಸುತ್ತೀರಿ. ಈಗ ನಾವು ಪಾಪಗಳ ಖಾತೆಯನ್ನು ಸಮಾಪ್ತಿ ಮಾಡಿಕೊಂಡು ಪುಣ್ಯದ ಖಾತೆಯನ್ನು ಜಮಾ ಮಾಡಿಕೊಳ್ಳಬೇಕಾಗಿದೆ. ಹೊಸದಾಗಿ 21 ಜನ್ಮಗಳಿಗಾಗಿ ಜಮಾ ಮಾಡಿಕೊಳ್ಳಬೇಕಾಗಿದೆ. ತಂದೆಯ ನೆನಪು ಮಾಡುವುದರಿಂದಲೇ ಜಮಾ ಆಗುತ್ತದೆ. ಹಳೆಯ ಖಾತೆಗಳೆಲ್ಲವೂ ಸಮಾಪ್ತಿಯಾಗಿಬಿಡಬೇಕು. ಜ್ಞಾನವು ಎಷ್ಟೊಂದು ಸಹಜವಾಗಿದೆ. ನಿಮ್ಮದು ಪ್ರತಿನಿತ್ಯ ಎಷ್ಟೊಂದು ಸಂಪಾದನೆಯಾಗುತ್ತದೆ. ಯಾರೆಷ್ಟು ನೆನಪು ಮಾಡುತ್ತಾರೆಯೋ, ಸ್ವದರ್ಶನ ಚಕ್ರವನ್ನು ತಿರುಗಿಸುತ್ತಾರೊ ಅಷ್ಟು ಅಪಾರ ಲೆಕ್ಕವಿಲ್ಲದಷ್ಟು ಸಂಪಾದನೆ ಮಾಡಿಕೊಳ್ಳುತ್ತೀರಿ. ಅಲ್ಲಿ ಲೆಕ್ಕ ಮಾಡಲು ಆಗುವುದಿಲ್ಲ. ಈಗ ಗುಡಿಸಿಲಿನಲ್ಲಿ ಕುಳಿತಿದ್ದೀರಿ ನಂತರ ಮಹಲುಗಳಲ್ಲಿ ಕುಳಿತುಕೊಳ್ಳುತ್ತೀರಿ. ಗುಡಿಸಲು ಹಾಗೂ ಮಹಲುಗಳಲ್ಲಿ ಅಂತರವಂತೂ ಇರುತ್ತದೆಯಲ್ಲವೆ. ಬ್ರಹ್ಮಾರವರ ಮುಖಾಂತರ ಹೊಸಪ್ರಪಂಚದ ಸ್ಥಾಪನೆಯಾದಾಗ ಹಳೆಯ ಪ್ರಪಂಚದ ವಿನಾಶವಾಗಿಬಿಡುವುದು. ಈಗಿನ ಮಾತಾಗಿದೆಯಲ್ಲವೆ. ರಾಜ-ರಾಣಿಯ ರಾಜ್ಯ ಸ್ಥಾಪನೆಯಾಗಿಬಿಡುತ್ತದೆ ನಂತರ ಯಾರೆಷ್ಟು ಪುರುಷಾರ್ಥ ಮಾಡಿಕೊಳ್ಳುತ್ತೀರೋ ಅಷ್ಟೇ ನಂತರ ವಿನಾಶವಾಗಿಬಿಡುವುದು ಆದ್ದರಿಂದ ಈಗ ಹುಡುಗಾಟಿಕೆ ಮಾಡಬಾರದು. ಮುಂಜಾನೆ ಎದ್ದು ನೆನಪಿನಲ್ಲಿ ಕುಳಿತುಕೊಳ್ಳಬೇಕು. ಎಷ್ಟು ನೆನಪಿನ ಚಾರ್ಟ್ ಇಟ್ಟುಕೊಳ್ಳುತ್ತೀರೋ ಅಷ್ಟು ಒಳ್ಳೆಯದು ಮತ್ತು ಅಷ್ಟೇ ಶ್ರೇಷ್ಠಪದವಿಯನ್ನು ಪಡೆಯುವಿರಿ. ಶಿವತಂದೆಯ ಕೊರಳಿನ ಹಾರವಾಗುತ್ತೀರಿ ಅಂದಾಗ ಹೃದಯ ದರ್ಪಣದಲ್ಲಿ ನೋಡಿಕೊಳ್ಳಬೇಕು- ನಾನು ಲಕ್ಷ್ಮೀ-ನಾರಾಯಣರನ್ನು ವರಿಸಲು ಯೋಗ್ಯನಾಗಿದ್ದೇನೆಯೇ? ನಾನು ಮಮ್ಮಾ-ಬಾಬಾರವರ ತರಹ ಸರ್ವೀಸ್ ಮಾಡುತ್ತೇನೆಯೇ? ಭಿನ್ನ-ಭಿನ್ನ ಪ್ರಕಾರದ ಹೂಗಳಿದ್ದೀರಿ, ಇದು ಭಗವಂತ ತಂದೆಯ ಮಾನವನ ಹೂದೋಟವಾಗಿದೆ. ತಂದೆಯು ಹೇಳುತ್ತಾರೆ- ನೋಡಿ- ಕುಮಾರಿಕಾ, ಮನೋಹರ್ ಎಷ್ಟೊಂದು ಒಳ್ಳೊಳ್ಳೆಯ ಹೂಗಳಾಗಿದ್ದಾರೆ. ಈ ರತನ್ ಜ್ಯೋತಿಯಾಗಿದ್ದಾರೆ. ತಂದೆಯು ಈ ಹೂದೋಟವನ್ನು ನೋಡುತ್ತಾ ಮತ್ತೆ ಆ ಹೂದೋಟದಲ್ಲಿ ಹೋಗಿ ಹೂಗಳನ್ನು ನೋಡುತ್ತಾರೆ. ಭಗವಂತನು ಹೂಗಳ ಪರಿಶೀಲನೆ ಮಾಡುತ್ತಾರೆಂದರೆ ಮಕ್ಕಳೂ ಸಹ ಅನುಸರಣೆ ಮಾಡಬೇಕು- ನಂಬರ್ವನ್, ಎರಡನೇ ಹೂಗಳು ಯಾರು-ಯಾರು ಆಗಿದ್ದಾರೆ. ಈ ರೀತಿ ಆಗಬೇಕು. 21 ಜನ್ಮಗಳಿಗಾಗಿ ರಾಜ್ಯಪದವಿಯನ್ನು ಪಡೆಯುವುದು ಕಡಿಮೆ ಮಾತೇನು! ಅಪಾರ ಸುಖವಿರುತ್ತದೆ, ವಿಶ್ವದ ಮಾಲೀಕರಾಗಬೇಕಾಗಿದೆ. ಇದು ಶಾಲೆಯಾಗಿದೆ. ಆ ಶಾರೀರಿಕ ವಿದ್ಯೆಯ ಜೊತೆಗೆ ಈ ಆತ್ಮಿಕ ವಿದ್ಯೆಯನ್ನು ಓದಿ ಶಿಕ್ಷಕನ ನಡುವಳಿಕೆಯು ಸದಾ ಒಳ್ಳೆಯದಾಗಿರುತ್ತದೆ. ಸತ್ಯವಂತರಾಗಿರುತ್ತಾರೆ, ಪ್ರಾಮಾಣಿಕರಾಗಿರುತ್ತಾರೆ. ಶಾಲೆಯಲ್ಲಿ ಅಂಧಶ್ರದ್ಧೆಯ ಮಾತಿಲ್ಲ. ಅಲ್ಲಿ ಬ್ಯಾರಿಸ್ಟರಿ, ಇಂಜಿನಿಯರಿಂಗ್ ಓದುತ್ತಾರೆ, ಇಲ್ಲಿ ನೀವು ರಾಜರಿಗೂ ರಾಜರಾಗಲು ಓದುತ್ತೀರಿ. ಸನ್ಯಾಸಿಗಳಂತೂ ಈಶ್ವರನೇ ಸರ್ವವ್ಯಾಪಿಯಾಗಿದ್ದಾರೆಂದು ಹೇಳಿಬಿಡುತ್ತಾರೆ. ಆಟವನ್ನೇ ಸಮಾಪ್ತಿ ಮಾಡಿಬಿಡುತ್ತಾರೆ. ಬೇಹದ್ದಿನ ತಂದೆಯು ಮಕ್ಕಳಿಗೆ ತಿಳಿಸುತ್ತಾರೆ- ಮಕ್ಕಳೇ, ಈ ಅಂತಿಮ ಜನ್ಮದಲ್ಲಿ ಪವಿತ್ರರಾಗಿರಿ, ನೀವು ಬಹಳ ಸರ್ವೀಸನ್ನು ಮಾಡಬಹುದು.

ಹೇಗೆ ಅಲ್ಲಿಯೂ ಸಹ ಶಿಕ್ಷಣ ಇಲಾಖೆಯಿರುತ್ತದೆಯೋ ಹಾಗೆಯೇ ಇದೂ ಸಹ ಈಶ್ವರೀಯ ಶಿಕ್ಷಣ ಇಲಾಖೆಯಾಗಿದೆ. ನೀವು ಮಕ್ಕಳು ರಾಜಋಷಿಗಳಾಗಿದ್ದೀರಿ. ಅವರಂತೂ ಮನೆ-ಮಠಗಳನ್ನು ಬಿಟ್ಟುಬಿಡುತ್ತಾರೆ ಆದರೆ ನೀವಂತೂ ಮನೆಯಲ್ಲಿರುತ್ತಾ ಇಡೀ ಪ್ರಪಂಚದ ತ್ಯಾಗ ಮಾಡುತ್ತೀರಿ. ನಿಮ್ಮ ಬುದ್ಧಿಯಲ್ಲಿ ಈಗ ಹೊಸ ಪ್ರಪಂಚವಿದೆ. ಅದನ್ನು ತಂದೆಯೇ ಸ್ಥಾಪನೆ ಮಾಡುತ್ತಾರೆ ಆದ್ದರಿಂದ ತಂದೆಯು ಹೇಳುತ್ತಾರೆ- ನೀವು ನನ್ನನ್ನು ನೆನಪು ಮಾಡಿ, ಈಗ ಈ ಹಳೆಯ ಪ್ರಪಂಚವು ಸಮಾಪ್ತಿಯಾಗಿಬಿಡುವುದು. ಈ ಆತ್ಮಿಕ ವಿಶ್ವವಿದ್ಯಾಲಯ ಅಥವಾ ಆಸ್ಪತ್ರೆಯೂ ಸಹ ಬಹಳ ದೊಡ್ಡದಾಗಿದೆ. ಇದರಿಂದ ನೀವು ಸದಾ ಆರೋಗ್ಯವಂತರು, ಐಶ್ವರ್ಯವಂತರಾಗುತ್ತೀರಿ. ಮನೆ-ಮನೆಯಲ್ಲಿಯೂ ನೀವು ಈ ಆಸ್ಪತ್ರೆ ಅಥವಾ ಕಾಲೇಜನ್ನು ತೆರೆಯಬಹುದು. ಇದರಲ್ಲಿ ಯಾವುದೆ ಖರ್ಚಿಲ್ಲ ಕೇವಲ ಮೂರುಹೆಜ್ಜೆಗಳ ಪೃಥ್ವಿ ಬೇಕು. ಒಳ್ಳೆಯದು!

ಮಧುರಾತಿ ಮಧುರ ಅಗಲಿಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಬೆಳಗ್ಗೆ-ಬೆಳಗ್ಗೆ ಎದ್ದು ಅವಶ್ಯವಾಗಿ ನೆನಪಿನಲ್ಲಿ ಕುಳಿತುಕೊಳ್ಳಬೇಕಾಗಿದೆ. ಇದರಲ್ಲಿ ಹುಡುಗಾಟಿಕೆ ಮಾಡಬಾರದು. ಪುಣ್ಯದ ಖಾತೆಯನ್ನು ಜಮಾ ಮಾಡಿಕೊಳ್ಳಬೇಕು.

2. ಗುರಿ-ಧ್ಯೇಯವನ್ನು ಬುದ್ಧಿಯಲ್ಲಿಟ್ಟುಕೊಂಡು ಒಳ್ಳೆಯ ನಡುವಳಿಕೆಯನ್ನು ಧಾರಣೆ ಮಾಡಬೇಕಾಗಿದೆ. ಆತ್ಮಿಕ ವಿದ್ಯೆಯನ್ನು ಅವಶ್ಯವಾಗಿ ಓದಬೇಕಾಗಿದೆ. ಅಂತರ್ಮುಖಿ ಆಗಿರಬೇಕಾಗಿದೆ.

ವರದಾನ: ಬ್ರಾಹ್ಮಣ ಜೀವನದ ವಿಶೇಷತೆಗಳನ್ನು ತಿಳಿದು ಅದನ್ನು ಕಾರ್ಯದಲ್ಲಿ ತೊಡಗಿಸುವಂತಹ ಸರ್ವ ವಿಶೇಷತಾ ಸಂಪನ್ನ ಭವ.

ಡ್ರಾಮಾದ ನಿಯಮ ಪ್ರಮಾಣ ಸಂಗಮಯುಗದಲ್ಲಿ ಪ್ರತಿಯೊಬ್ಬ ಬ್ರಾಹ್ಮಣ ಆತ್ಮನಿಗೆ ಯಾವುದಾದರೂ ಒಂದು ವಿಶೇಷತೆ ಸಿಕ್ಕಿದೆ. ಮಾಲೆಯ ಕೊನೆಯ ಮಣಿಯಾಗಿರಬಹುದು, ಅವರಲ್ಲಿಯೂ ಸಹ ಏನಾದರೂ ಒಂದು ವಿಶೇಷತೆ ಇರುವುದು, ಆದ್ದರಿಂದ ಬ್ರಾಹ್ಮಣ ಜನ್ಮದ ಭಾಗ್ಯದ ವಿಶೇಷತೆಗಳನ್ನು ಗುರುತಿಸಿ ಮತ್ತು ಅದನ್ನು ಕಾರ್ಯದಲ್ಲಿ ತೊಡಗಿಸಿ. ಒಂದು ವಿಶೇಷತೆಯನ್ನು ಕಾರ್ಯದಲ್ಲಿ ತೊಡಗಿಸಿದಾಗ ಬೇರೆ ವಿಶೇಷತೆಗಳು ಸ್ವತಃ ಬರುತ್ತಾ ಹೋಗುವುದು, ಒಂದರ ಮುಂದೆ ಇನ್ನೊಂದು ಬಿಂದು ಹಾಕುತ್ತಾ-ಹಾಕುತ್ತಾ ಸರ್ವ ವಿಶೇಷತೆಗಳಿಂದ ಸಂಪನ್ನರಾಗಿ ಬಿಡುವಿರಿ.

ಸ್ಲೋಗನ್: ಮನ್ಮನಾಭವದ ಮಂತ್ರದ ಸದಾ ಸ್ಮತಿ ಇದ್ದಾಗ ಮನಸ್ಸಿನ ಅಲೆದಾಟ ಬಂದ್ ಆಗಿ ಬಿಡುವುದು.